ಕ್ರ.ಸಂ.	ತಾಲ್ಲೂಕು	ಮಂಜೂರು	ಖಾಲಿ
1	ಉಡುಪಿ	15	6
2	ಕುಂದಾಪುರ	12	4
3	ಕಾರ್ಕಳ	8	4
	ಒಟ್ಟು	**35**	**14**

ಈ) ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ:111:ಪಸಸೇ:99 ದಿನಾಂಕ: 20:11:2000 ರ ಪ್ರಕಾರ ರಾಜ್ಯದಲ್ಲಿ ಹಾಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಸಾಕಷ್ಟಿದ್ದು ಹೊಸ ಸಂಸ್ಥೆಗಳನ್ನು ತೆರೆಯಲು ಅವಕಾಶ ಇರುವುದಿಲ್ಲ.

ಹಾಲಿ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಅವಕಾಶ ಇರುತ್ತದೆ. ಇದರ ಪ್ರಕಾರ ರಾಜ್ಯಾದ್ಯಂತ ಇದುವರೆವಿಗೂ 600 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 147 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಉಡುಪಿ ಜಿಲ್ಲೆಯಲ್ಲಿ 2000–01 ರಿಂದ ಒಟ್ಟು 9 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ, 3 ಪ್ರಾಥಮಿಕೆ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ:111:ಪಸಸೇ:99 ದಿನಾಂಕ: 20:11:2000ರ ಪ್ರಕಾರ ರಾಜ್ಯದಲ್ಲಿ ಹಾಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಸಾಕಷ್ಟಿದ್ದು ಹೊಸ ಸಂಸ್ಥೆಗಳನ್ನು ತೆರೆಯಲು ಅವಕಾಶ ಇರುವುದಿಲ್ಲ. ಹಾಲಿ ಇರುವ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಅವಕಾಶ ಇರುತ್ತದೆ.

ಡಾ: ಡಿ.ಎಂ.ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನ ವರದಿಯಂತೆ, ರಾಜ್ಯದ 39 ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಮಾತ್ರ 69 ಹೊಸ ಪಶುಚಿಕಿತ್ಸಾಲಯಗಳನ್ನು ತೆರೆಯುವ ಅವಕಾಶವಿರುತ್ತದೆ.

5130 (6116) ಶ್ರೀ ರಘುಪತಿ ಭಟ್ ಕೆ. (ಉಡುಪಿ): ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರಿನಲ್ಲಿ ಪ್ರಾರಂಭಿಸು ಉದ್ದೇಶಿಸಿರುವ ಓ.ಎನ್.ಜಿ.ಸಿ. ಯೋಜನೆ ಯಾವ ಹಂತದಲ್ಲಿದೆ.;

ಆ) ಕೇಂದ್ರ ಸರ್ಕಾರದಿಂದ ಇದನ್ನು ಸ್ಥಳಾಂತರಿಸುವ ಯೋಚನೆ ಆಗುತ್ತಿರುವುದು ಯಾವ ಕಾರಣಕ್ಕಾಗಿ;

ಇ) ಈ ಯೋಜನೆಯ ವೆಚ್ಚ ವೆಷ್ಟು; ಇದರಿಂದ ರಾಜ್ಯಕ್ಕಾಗುವ ಲಾಭ ಏನು;

ಈ) ಈ ಯೋಜನೆ ಯಾವಾಗ ಮಂಜೂರು ಮಾಡಲಾಯಿತು; ಯಾವಾಗ ಒಡಂಬಡಿಕೆಗೆ ಸಹಿ ಹಾಕಲಾಯಿತು;

ಉ) ಈ ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರದ ನಿಲುವೇನು; ಓ.ಎನ್.ಜಿ.ಸಿ. ಯೋಜನೆಯ ವಿವರ ಒದಗಿಸುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮಂಗಳೂರಿನಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆ ಹಾಗೂ ಬೃಹತ್ ಪೆಟ್ರೋಕೆಮಿಕಲ್ ಸ್ಥಾವರ ಸ್ಥಾಪನೆಗಾಗಿ ಓ.ಎನ್.ಜಿಸಿ, ಕೆನರಾ ಕೈಗಾರಿಕೆ ಮತ್ತು ವಾಣಿಜ್ಯ ಸಂಘ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನಡುವೆ ಒಡಂಬಡಿಕೆಯನ್ನು ದಿನಾಂಕ: 30.8.2004 ರಂದು ಸಹಿ ಮಾಡಲಾಗಿದೆ.

ಅದೇ ರೀತಿ ವಿಶೇಷ ಆರ್ಥಿಕ ವಲಯದಲ್ಲಿ ಓ.ಎನ್.ಜಿ.ಸಿ. ರವರು ಸ್ಥಾಪಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗಳಿಗೆ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿಯಿಂದ ಅನುಮೋದನೆ ನೀಡಲಾಗಿದೆ.

ಕ್ರ.ಸ	ಯೋಜನೆ	ಬಂಡವಾಳ ರೂ.ಕೋಟಿ
1	ಪೆಟ್ರೋ ಕೆಮಿಕಲ್ಸ್ ಸ್ಥಾವರ	7465.00
2	ಎಲ್‌ಎನ್‌ಜಿ ಅನಿಲ ಆಧಾರಿತ 2000MW ಶಾಕೋತ್ಪನ್ನ ವಿದ್ಯುತ್ ಘಟಕ	8594.00
3	ಎಲ್.ಎನ್.ಜಿ. ಅಮುದು ಮತ್ತು ಸಂಸ್ಕರಣಾ ಘಟಕ	3590.00
4	ಮಂಗಳೂರು–ಬೆಂಗಳೂರು ಅನಿಲ ಸಾಗಾಣಿಕ ಕೊಳವೆ ಯೋಜನೆ.	945.00
5	ರಾಜ್ಯಾದ್ಯಂತ 200 ಇಂಧನ ವಿತರಣಾ ಕೇಂದ್ರಗಳು	572.00
	ಒಟ್ಟು	**21176.00**

ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ಕೇಂದ್ರ ಸರ್ಕಾರದ ಅನುಮೋದನೆಯನ್ನು ದಿನಾಂಕ 8.8.2003 ರಂದು ಪಡೆಯಲಾಗಿದೆ ಹಾಗೂ ಯೋಜನೆಯನ್ನು ಕಾರ್ಯಗತ ಗೊಳಿಸಲು ಒಂದು ವಿಶೇಷ ಕಂಪನಿಯನ್ನು ನೊಂದಾಯಿಸುವ ಕಾರ್ಯ ಪ್ರಗತಿಯಲ್ಲಿದೆ. ಈಗಾಗಲೇ ಮಂಡಳಿಯ ವಶದಲ್ಲಿರುವ ಜಮೀನಿನ ಜೊತೆಗೆ ಹೆಚ್ಚುವರಿ 458 ಎಕರೆ ಜಮೀನನ್ನು ಭೂಸ್ವಾಧೀನಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

ಪೆಟ್ರೋಕೆಮಿಕಲ್ ಸಂಕೀರ್ಣಕ್ಕೆ ಸಂಬಂಧಿಸಿದಂತೆ, ಪೂರ್ವ ಬಾವಿ ಕ್ರಮಗಳನ್ನು ಓಎನ್‌ಜಿಸಿ ಕೈಗೊಂಡಿದೆ ಹಾಗೂ ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗುತ್ತಿದೆ.

ಆ) ಯೋಜನೆಯನ್ನು ಸ್ಥಳಾಂತರಿಸುವ ಯಾವುದೇ ಪ್ರಸ್ತಾಪವಿರುವುದಿಲ್ಲ. ಆದರೆ, ಯೋಜನೆಯ ಪ್ರಮುಖ ಅಂಗವಾದ 2000 ಮೆಗಾವಾಟ್ ಅನಿಲ ಆಧಾರಿತ ವಿದ್ಯುತ್ಶಕ್ತಿ ಸ್ಥಾವರವನ್ನು ಓ.ಎನ್.ಜಿ.ಸಿ ರವರು ಕಾರ್ಯಗತಗೊಳಿಸಲು ಕೇಂದ್ರೀಯ ತೈಲ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವು ಒಪ್ಪಿಗೆ ನೀಡುತ್ತಿಲ್ಲ.

ಇ) ಯೋಜನೆಯ ಅಂದಾಜು ವೆಚ್ಚವನ್ನು ಕಂಡಿಕೆ 'ಅ' ರಲ್ಲಿ ಸೂಚಿಸಲಾಗಿದೆ. ಕರಾವಳಿ ವಿಶೇಷ ಆರ್ಥಿಕ ವಲಯ ಹಾಗೂ ಬೃಹತ್ ಪೆಟ್ರೋಕೆಮಿಕಲ್ ಸ್ಥಾವರವನ್ನು ಮಂಗಳೂರಿನಲ್ಲಿ ಸ್ಥಾಪಿಸುವುದರಿಂದ ರಾಜ್ಯವು ಪ್ರಸಕ್ತ ಎದುರುಸುತ್ತಿರುವ ವಿದ್ಯುಚ್ಛಕ್ತಿ ಕೊರತೆಯನ್ನು ಹೋಗಲಾಡಿಸಲು

ಹಾಗೂ ರಾಜ್ಯಕ್ಕೆ ಅಗತ್ಯ ಇಂಧನ ಪೂರೈಕೆ ಮತ್ತು ಮೌಲ್ಯ ಹೆಚ್ಚಿಸಿದ ವಿವಿಧ ಪೆಟ್ರೋಕೆಮಿಕಲ್ ವಸ್ತುಗಳನ್ನು ಸ್ಥಳೀಯ ಉಪಯೋಗ ಹಾಗೂ ರಫ್ತುಗಾಗಿ ಉತ್ಪಾದಿಸಲು ನೆರವಾಗುವುದು.

ಈ) ಕಂಡಿಕೆ 'ಅ' ರಲ್ಲಿ ಉತ್ತರಿಸಲಾಗಿದೆ.

ಉ) ವಿದ್ಯುಚ್ಛಕ್ತಿ ಉತ್ಪಾದನಾ ಘಟಕ ಸೇರಿದಂತೆ, ದಿನಾಂಕ 30–8–2004ರ ಒಪ್ಪಂದದಲ್ಲಿ ಸೂಚಿಸಲಾದ ಎಲ್ಲಾ ಯೋಜನೆಗಳನ್ನು ಓ.ಎನ್.ಜಿ.ಸಿ.ರವರೆ ಕಾರ್ಯಗತಗೊಳಿಸಬೇಕೆಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಸದರಿ ಯೋಜನೆಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರವನ್ನು ಮಾನ್ಯ ಪ್ರಧಾನ ಮಂತ್ರಿಗಳ ಗಮನಕ್ಕೂ ಸಹ ತರಲಾಗಿದೆ ಹಾಗೂ ಕೇಂದ್ರ ಸರ್ಕಾರದ ಅಂತಿಮ ನಿರ್ಧಾರವನ್ನು ನಿರೀಕ್ಷಿಸಲಾಗಿದೆ.

5131 (6117) ಶ್ರೀ ರಘುಪತಿ ಭಟ್ ಕೆ. (ಉಡುಪಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಇರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಹಾಸ್ಟೆಲ್ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ರಾಜ್ಯದಲ್ಲಿ ಒಟ್ಟು ಇರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಾಸ್ಟೆಲ್ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಈ ಎರಡು ವರ್ಗಗಳ ವಿದ್ಯಾರ್ಥಿಗಳ ಹಾಸ್ಟೆಲ್‌ಗಳ ಹೆಚ್ಚು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಸಾಲಿನಲ್ಲಿ ಎಷ್ಟು ಹೊಸ ಹಾಸ್ಟೆಲ್‌ಗಳನ್ನು ತೆರೆಯಲಾಗುವುದು;

ಈ) ಈ ವಿದ್ಯಾರ್ಥಿಗಳಿಗೆ ಯಾವ ಸವಲತ್ತುಗಳನ್ನು ಕೊಡಲಾಗುತ್ತದೆ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿಗಳಿಗಾಗಿ ಒಟ್ಟು 1764 ಸರ್ಕಾರಿ ಅನುದಾನಿತ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿವೆ. ಮತ್ತು ಪರಿಶಿಷ್ಟ ವರ್ಗಗಳ ಒಟ್ಟು ವಿದ್ಯಾರ್ಥಿನಿಲಯಗಳು 124 ಇವೆ. (ಜಿಲ್ಲಾವಾರು ವಿವರಗಳು ಅನುಬಂಧದಲ್ಲಿ ಇವೆ.)

ಆ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಒಟ್ಟು 1432 ವಿದ್ಯಾರ್ಥಿ ನಿಲಯಗಳಿರುತ್ತವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಇ) ಹೌದು.

2005–06ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದ ಈ ಕೆಳಕಂಡ ಸ್ಥಳಗಳಲ್ಲಿ ದುರ್ಬಲ ವರ್ಗದವರಿಗೆ ವೃತ್ತಿಪರ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಮಂಜೂರು ಮಾಡುವ ಬಗ್ಗೆ ಘೋಷಿಸಲಾಗಿರುತ್ತದೆ.

1. ಬೆಂಗಳೂರುನಗರ
2. ಮೈಸೂರು ನಗರ
3. ಬಳ್ಳಾರಿ ನಗರ
4. ಹುಬ್ಬಳ್ಳಿ ನಗರ

ಮೆಟ್ರಿಕ್ ಪೂರ್ವ ವಸತಿ ನಿಲಯಗಳ ಮಂಜೂರಾತಿಯನ್ನು ಆಯವ್ಯಯ ಲಭ್ಯತೆಯನ್ವಯ ಪರಿಶೀಲಿಸಲಾಗುವುದು.

ಈ) ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ ವಸತಿ, ಸಮವಸ್ತ್ರ, ಲೇಖನ ಸಾಮಗ್ರಿ ಕ್ಷೌರ, ವೈದ್ಯಕೀಯ, ಅರೆಕಾಲಿಕ ಭೋಜನಾ ವೆಚ್ಚ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.